ವಿಶೇಷ ಸತ್ರ ಪ್ರಕರಣ ಸಂಖ್ಯೆ: 137/2023

ಪ್ರಾಸಾ 01
ಚಾಸಾ 04

**ಕರ್ನಾಟಕ ಸರ್ಕಾರ** **(ಸಿ.ಆರ್.ಪಿ.67)**

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ: 57)**
**ನಮೂನೆ ಸಂಖ್ಯೆ 4**
**(ಸಿವಿಲ್)**

**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**
**ವಿಶೇಷ ಸತ್ರ ಪ್ರಕರಣ ಸಂಖ್ಯೆ: 137/2024**

**ದಿನಾಂಕ: 06.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| **ಸಾಕ್ಷಿದಾರರ ಹೆಸರು** | :- | ಪ್ರಮೀಳಾ |
| ಗಂಡನ ಹೆಸರು | :- | ನಾರಾಯಣಸ್ವಾಮಿ |
| **ವಯಸ್ಸು** | :- | ಗೊತ್ತಿಲ್ಲ (ಅಂದಾಜು 50 ವರ್ಷ ಇರಬಹುದು) |
| **ಉದ್ಯೋಗ** | :- | ಕೂಲಿ ಕೆಲಸ |
| **ವಾಸಸ್ಥಳ** | :- | ಹುಸೇನ್ ಪುರ, ಚಿಂತಾಮಣಿ ತಾಲ್ಲೂಕು |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

1. ಮೃತ ನಾರಾಯಣಸ್ವಾಮಿ ನನ್ನ ಗಂಡ, ಚಾಸಾ-1 ನನ್ನ ಮೈದ, ಚಾಸಾ-2, ಚಾಸಾ7 ಚಾಸಾ-1 ರವರ ಮಕ್ಕಳು, ಚಾಸಾ-3 ಚಾಸಾ-2 ರವರ ಗಂಡ, ಚಾಸಾ-5,6 ಗೊತ್ತು.

2. ನಾನು ನಮ್ಮ ಮನೆಯಲ್ಲಿದ್ದಾಗ ಸಂಜೆ **4.00** ಗಂಟೆ ಸಮಯದಲ್ಲಿ ನಮ್ಮ ಊರಿನ ಹುಡುಗಿ ಅಮೂಲ್ಯ ಬಂದು ನನ್ನ ಗಂಡನಿಗೆ ಹೊಡೆದಿದ್ದಾರೆಂದು ಹೇಳಿದ್ದಳು. ಕೂಡಲೆ ನಾನು ಚಾಸಾ-1 ರವರ ಮನೆಯ ಬಳಿ ಹೋಗಿರುತ್ತೆನೆ. ನಾನು ಅಲ್ಲಿಗೆ ಹೋದಾಗ, ಆರೋಪಿತರು ನನ್ನ ಗಂಡನ ಎದೆ ಹಾಗೂ ಹೊಟ್ಟೆಗೆ ಒದ್ದಿರುತ್ತಾರೆ. ಸದರಿ ಅಮೂಲ್ಯ ಆರೋಪಿತರು ನನ್ನ ಗಂಡನ ಎದೆ ಹಾಗೂ ಹೊಟ್ಟೆಗೆ ಒದ್ದಿದ್ದಾರೆಂದು ಹೇಳಿದರು. ನನ್ನ ಗಂಡನನ್ನು ಮರುದಿನ ಚಿಂತಾಮಣಿ

ಪ್ರಾಸಾ 01
ಚಾಸಾ 04

ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಚಿಕ್ಕಬಳ್ಳಾಪುರ ಆಸ್ಪತ್ರೆಗೆ ನನ್ನ ಗಂಡನನ್ನು ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿಗೆ ಬರುವಷ್ಟರಲ್ಲಿ ನನ್ನ ಗಂಡ ತೀರಿ ಹೋಗಿದ್ದರು.

3. ನನ್ನ ಗಂಡ ಆರೋಗ್ಯವಾಗಿದ್ದರು. ಯಾವ ಕಾರಣದಿಂದ ನನ್ನ ಗಂಡ ತೀರಿ ಹೋದರು ಎಂದು ನನಗೆ ತಿಳಿದಿಲ್ಲ.

4. ನಾವು ನಾಯಕ ಜಾತಿಗೆ ಸೇರಿರುತ್ತೆವೆ. ಆರೋಪಿತರು ಭಜಂತ್ರಿ ಜಾತಿಗೆ ಸೇರಿರುತ್ತಾರೆ.

ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಗೆ ಅವಕಾಶ ಕೋರುತ್ತಿದ್ದು, ಅವರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಗಿದೆ.

**(ದಿನಾಂಕ: 06.11.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಶಿವಪ್ರಸಾದ್.ಕೆ.ಬಿ.)**
**1ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**